‘ಆಗ.... ಆಗ... ನೀನು ಅತ್ತೆಯಾ?’

‘ಬಹಳ ಅತ್ತೆ’

‘ಈಗ ನನ್ನ ಸ್ಥಿತಿ ಕೂಡಾ ಅದೇ. ಆದರೆ ಅದಕ್ಕಿಂತ ಘೋರವಾದ ಸಂಕಟ ನಮ್ಮ ತಂದೆ ಬದುಕಿದ್ದಾರಾ? ಬದುಕಿದ್ದರೆ ಎಲ್ಲಿದ್ದಾರೆ?... ನನ್ನ ತಂದೇನ ನಾನೆಷ್ಟು ಪ್ರೀತಿಸ್ತೀನೋ ನಿನಗೆ ತಿಳಿದಿಲ್ಲ ಪ್ರೇಮ್. ಯಾರಾದರೂ ಅವರನ್ನು ಕಿಡ್ನಾಪ್ ಮಾಡಿದರೋ ಗೊತ್ತಿಲ್ಲ... ಎಷ್ಟು ಟಾರ್ಚರ್ ಕೊಡುತ್ತಿದ್ದಾರೋ ಗೊತ್ತಿಲ್ಲ. ಅವರ ನೆನಪಾದರೆ...’ ಎಂದು ಬಿಕ್ಕಿಬಿಕ್ಕಿ ಅತ್ತಳು.

ದೂರದಲ್ಲಿ ಯಾವುದೋ ಪ್ರಾಣಿ ಹೃದಯ ವಿದ್ರಾವಕವಾಗಿ ಕಿರುಚುತ್ತಿತ್ತು.

‘ಏನದು?’ ಎಂದು ಕೇಳಿದಳು.

‘ಪೋಚರ್ಸ್... ಪ್ರಾಣಿಗಳಿಗೋಸ್ಕರ ಗುಂಡಿ ತೋಡಿ ಎಲೆಗಳಿಂದ ಮುಚ್ಚುತ್ತಾರೆ. ಅದರಲ್ಲಿ ಕೆಲವು ಸರಿ ಆನೆ ಮರಿಗಳು ಕೂಡ ಬೀಳುತ್ತವೆ. ತಾಯಿ ಆನೆ ಆ ಹಳ್ಳದ ಸುತ್ತ ಸುತ್ತುತ್ತ ಹೀಗೆ ಕಿರುಚುತ್ತಾ ಇರುತ್ತದೆ’

‘ನಾನು ಅಪ್ಪನಿಗಾಗಿ ಅಳುತ್ತಿರುವ ಹಾಗೆ’ ಮನಸ್ಸಿನಲ್ಲೇ ಅಂದುಕೊಂಡಳು ಕಲ್ಯಾಣಿ.

ಮತ್ತೆ ಮೂರು ನಾಲ್ಕು ಗಂಟೆಗಳು ಕಳೆದವು. ಅರ್ಧರಾತ್ರಿ ಆಗಿತ್ತು. ಅವಳು ನಿದ್ರಿಸುತ್ತಿದ್ದಳು. ಅವನ ರೆಪ್ಪೆ ಬಡಿಯದೆ ಅವಳನ್ನೇ ನೋಡುತ್ತಿದ್ದನು. ಇಬ್ಬರ ನಡುವೆ ಬೆಂಕಿ ಇತ್ತು. ಅವನ ಮನಸ್ಸಿನಲ್ಲೂ ಬಯಕೆಯ ಬೆಂಕಿ ದಹಿಸುತ್ತಿತ್ತು. ಅವಳು ಮಗ್ಗುಲಾಗಿ ಮಲಗಿದ್ದಳು. ಉರಿಯ ಕೆಂಪು ವರ್ಣ ಅವಳ ಮುಖದ ಮೇಲೆ ಲಾಸ್ಯವಾಡುತ್ತಿತ್ತು.

ಅವನೆದ್ದು ಹೋಗಿ, ಮೊಳಕಾಲೂರಿ ಕುಳಿತು ಅವಳ ಮೈಮೇಲೆ ಕೈ ಹಾಕಿದನು. ಅವಳು ಕಣ್ತೆರೆದಳು. ಅವನು ಸ್ನೇಹಪೂರ್ವಕವಾಗಿ ನಕ್ಕನು.

‘ನಾನೊಬ್ಬಳು ಅನಾಥೆ. ಗಂಡ ಸತ್ತ ದುಃಖದಲ್ಲಿದ್ದೇನೆ, ಈ ಪರಿಸ್ಥಿತಿಯಲ್ಲಿ ನನ್ನ ಮೇಲೆ ಬಿದ್ದು ಅದ್ಯಾವ ಸುಖ ಅನುಭವಿಸುತ್ತೀಯ?’ ಎಂದಳು ನಿರಾಸಕ್ತಿ, ನಿರ್ಭಾವಗಳಿಂದ.

‘ನಿನಗೊಂದು ವಿಷಯ ಹೇಳಲೇನು? ಇಷ್ಟುದಿನ ಹೇಳಿರಲಿಲ್ಲ, ಈಗ ಹೇಳುತ್ತಿದ್ದೇನೆ.... ನಿಮ್ಮಪ್ಪ ಎಲ್ಲಿದ್ದಾನೆ ಅಂತ ನನಗೆ ಗೊತ್ತಿದೆ’

ಅವಳು ಕಣ್ಣರಳಿಸಿ ‘ನಿಜವಾ?’ ಎಂದಳು.

‘ಏನು ನಡೆಯಿತು ಅಂತ ಹೇಳ್ತೀನಿ ಕೇಳು. ನಿನ್ನಪ್ಪನನ್ನು ಉಗ್ರವಾದಿಗಳು ಕಾಶ್ಮೀರದಾಚೆಗೆ ಕರೆದೊಯ್ದರು. ನಾವು ಸಾಧ್ಯವಾದಷ್ಟು ಬೇಗ ಅಲ್ಲಿಗೆ ಹೋಗಬೇಕು. ನಿನ್ನನ್ನು ನಿನ್ನಪ್ಪನ ಜೊತೆ ಸೇರಿಸುವುದಕ್ಕೇ ಇಷ್ಟು ದೂರ ಕರೆದುಕೊಂಡು ಬಂದೆ’

‘ಓ ಮೈ ಗಾಡ್.... ಇದು ನಿಜವಾದರೆ, ನನಗೆ ಇದಕ್ಕಿಂತ ಬೇರೇನು ಬೇಕು? ಆದರೆ ಈ ವಿಷಯ ನಿನಗೆ ಹೇಗೆ ತಿಳಿಯಿತು?’

‘ಹೇಳಿದರೆ ನಿನ್ನೆದೆ ಒಡೆದು ಹೋಗುತ್ತದೆ. ಬಾರ್‌ನಲ್ಲಿ ಕಂಠಪೂರ್ತಿ ಕುಡಿದಾಗ ಈ ವಿಷಯವನ್ನು ನಿನ್ನ ಗಂಡನೇ ಹೇಳಿದ. ಈ ವಿಷಯ ನಿನಗೆ ತಿಳಿದರೆ ನೀನು ಅಪ್ಸೆಟ್ ಆಗುತ್ತೀಯ ಅಂತ ಪೊಲೀಸರು ಈ ವಿಷಯ ಮುಚ್ಚಿಟ್ಟರು. ತಂದೆ ಸಿಗುವುದಿಲ್ಲ ಅಂತ ತಿಳಿದರೆ ನೀನು ಮದುವೆಗೆ ಒಪ್ಪುವುದಿಲ್ಲ ಅಂತ, ನಿನ್ನಪ್ಪನನ್ನು ಹುಡುಕುತ್ತಿರುವ ಹಾಗೆ ನಟಿಸಿ ನಿನ್ನ ಸಹಾನುಭೂತಿ ಸಂಪಾದಿಸಿದ ಆ ನಿನ್ನ ಗಂಡ. ಆದರೆ ನಾನು ಹಾಗಲ್ಲ. ನಿನಗೋಸ್ಕರ ರಿಸ್ಕ್ ತೆಗೆದುಕೊಳ್ಳುತ್ತೇನೆ. ಗಡಿ ದಾಟಿ ಆ ಬದಿಗೆ ಹೋಗೋಣ ನಿನ್ನ ತಂದೆಗೋಸ್ಕರ ಹುಡುಕೋಣ. ಇದರಲ್ಲಿ ನನ್ನ ಪ್ರಾಣ ಹೋದರೂ ಪರವಾಗಿಲ್ಲ.... ಪ್ರೇಮಕ್ಕಿಂತ ಪ್ರಾಣ ದೊಡ್ಡದಲ್ಲ’

‘ನಾನು ಬಹಳ ಅದೃಷ್ಟವಂತೆ ಪ್ರೇಮ್.... ನನ್ನ ತಂದೆಯವರ ಬಗ್ಗೆ ದಿನಕ್ಕೊಂದು ನ್ಯೂಸ್ ಹೇಳುತ್ತಿದ್ದನು ಕೃಷ್ಣ. ಆಗಲೇ ನನಗೆ ಅನುಮಾನ ಬಂದಿತ್ತು’.

‘ನಿಮ್ಮ ಅಪ್ಪ ಅಂದರೆ ಅಷ್ಟು ಪ್ರೀತೀನಾ?’

‘ಪ್ರೀತಿಯಲ್ಲ, ಪ್ರಾಣ. ಅವರು ನನ್ನ ತಂದೆಯೇ ಅಲ್ಲ... ಒಬ್ಬ ಮುಸ್ಲಿಂ, ಚರ್ಚ್‌ಗೆ ಒಬ್ಬ ಕ್ರಿಶ್ಚಿಯನ್, ಮಸೀದಿಗೆ, ಇಬ್ಬರೂ ಸೇರಿ ಗುಡಿಗೆ ಹೋಗುವ ದಿನಕ್ಕಾಗಿ ಎದುರು ನೋಡುತ್ತಿರುವ ಸರ್ವಧರ್ಮಗಳ ಅಭಿಮಾನಿ. ಅವರೊಬ್ಬ ಅಪ್ಪಟ ದೇಶಭಕ್ತ’

‘ನಿನ್ನ ತಂದೆಗಾಗಿ ಏನು ಬೇಕಾದರೂ ಮಾಡ್ತೀಯಾ?’

‘ಏನು ಬೇಕಾದರೂ ಮಾಡ್ತೇನೆ’

‘ನಿನ್ನ ತಂದೆ ಎಲ್ಲಿದ್ದಾರೆಂದು ಹೇಳಿದರೆ... ನನ್ನವಳಾಗ್ತೀಯಾ?’

ಅವಳು ತಕ್ಷಣ ತಲೆ ಎತ್ತಿ ನೋಡಿದಳು. ಗೆಲ್ಲುತ್ತಿರುವ ಆನಂದವನ್ನು ಹತ್ತಿಕ್ಕಿ ಅವಳ ಕಡೆಗೇ ನೋಡುತ್ತಿದ್ದನು ಪ್ರೇಮ್. ಅವನ ನಂಬಿಕೆಯನ್ನು ನಿಜವಾಗಿಸುತ್ತ..

‘ನನಗೆ ನನ್ನ ತಂದೆಯನ್ನು ತೋರಿಸಿದರೆ ಏನು ಬೇಕಾದರೂ ಕೊಡುತ್ತೇನೆ’ ಎಂದಳು.

‘ನಿಮ್ಮ ತಂದೆಯನ್ನು ಕಂಡ ಮೇಲೆ ನನಗೆ ಮೋಸ ಮಾಡಿದರೆ?’

ಬೆಂಕಿಯ ಮೇಲೆ ಕೈಚಾಚಿ ‘ನಾನು ನಂಬುವ ಕುರಾನ್, ಭಗವದ್ಗೀತೆಗಳ ಮೇಲೆ ಪ್ರಮಾಣ ಮಾಡುತ್ತಿದ್ದೇನೆ’ ಎಂದಳು.

‘ನಾನು ಮನುಷ್ಯರನ್ನು ನಂಬುವುದಿಲ್ಲ. ನನಗೆ ಅಡ್ವಾನ್ಸ್ ಬೇಕು’

ಅವಳು ಯೋಚನೆಯಲ್ಲಿ ಮುಳುಗಿದಳು.

‘ನಿನಗಿಷ್ಟವಿಲ್ಲದಿದ್ದರೆ ಬಿಡು’ ಎಂದನು.

ಕೂಡಲೆ ಅವಳು ‘ಇಲ್ಲ ಇಲ್ಲ.... ಕೊಡುತ್ತೇನೆ’ ಎಂದಳು. ಮನಸ್ಸಿನಲ್ಲೇ ನಕ್ಕನು. ಒಳ್ಳೆಯ ಮಾತುಗಳಿಗೆ ಸಮಾಧಾನದ ಮಾತುಗಳಿಗೆ ಹೆಂಗಸರು ಹೇಗೆ ಬಲಿಯಾಗುತ್ತಾರೆಂದು ಅವನಿಗೆ ತಿಳಿದಿತ್ತು. ಅವಳ ಭುಜಗಳ ಸುತ್ತ ಕೈ ಹಾಕಿ ಅಂಗಾತವಾಗಿ ಮಲಗಿದನು. ಅವಳ ಪಕ್ಕದಲ್ಲಿ ಒರಗಿ ತುಟಿಗಳ ಕಡೆ ಬಾಗುತ್ತಿರುವ ಸಮಯದಲ್ಲಿ ಆಯಿತು ಸ್ಟ್ರೋಕು!

ಬೆನ್ನ ಮೂಳೆಯ ಮೇಲೆ ಹಾವು ಸರಿದ ಹಾಗೆ ಬೆವರಿದನು. ಮೆದುಳಿನಲ್ಲಿ ಸಾವಿರ ವೋಲ್ಟ್‌ಗಳ ಶಾಕ್ ತಗುಲಿದಂತೆ ಕಂಪಿಸಿದನು. ಮುಷ್ಟಿಗಳು ಬಿಗಿಯಾದವು. ‘ಇಂಜೆಕ್ಷನ್.... ಇಂಜೆಕ್ಷನ್’ ಎಂದು ಗೊಣಗಿದನು, ಕಿರುಚಿದನು, ದೇಹ ತಿರುಚಿಕೊಂಡಿತು.

ಅವಳು ಕೂಡಲೆ ಮೋಟಾರ್ ಬೈಕ್ ಕಡೆಗೆ ಓಡಿದಳು. ಅದೃಷ್ಟವಶಾತ್ ಒಂದು ಬಾರಿಗೆ ಸರಿ ಹೋಗುವಷ್ಟು ಡ್ರಗ್ ಇದ್ದಿತು. ತಂದು ಅದನ್ನು ಇಂಜೆಕ್ಟ್ ಮಾಡಿದಳು.

ಅವನು ನಿಧಾನವಾಗಿ ನಿದ್ರೆಗೆ ಜಾರುತ್ತಿದ್ದಳು.

ಮತ್ತೆ ಅವನು ಕಣ್ಣು ಬಿಟ್ಟಾಗ ಬೆಳಗಾಗಿತ್ತು. ಇಬ್ಬರೂ ನಡೆಯಲಾರಂಭಿಸಿದರು. ಒಂದು ಗಂಟೆ ನಡೆಯುವಷ್ಟರಲ್ಲಿ ಅವಳು ಪೂರ್ತಿಯಾಗಿ ದಣಿದಿದ್ದಳು.

‘ಬೈಕ್‌ನಲ್ಲಿ ಪೆಟ್ರೋಲ್ ಇಲ್ಲ. ಜೇಬಿನಲ್ಲಿ ದುಡ್ಡಿಲ್ಲ. ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದೀಯ? ಗಡಿಯ ತನಕ ನಡೆಯಬೇಕಾ? ಅಥವಾ ಈ ಕಾಡಿನಲ್ಲಿ ಪರ್ಮನೆಂಟಾಗಿ ಇದ್ದು ಬಿಡಬೇಕಾ?’

ಅವನು ಮಾತನಾಡಲಿಲ್ಲ.

‘ನನಗಂತೂ ಯಾರೂ ಇಲ್ಲ. ಅಟ್‌ಲೀಸ್ಟ್ ನಿನ್ನವರಿಗಾದರೂ ಫೋನ್ ಮಾಡು’

‘ನನಗೆ ಕೂಡ ಯಾರೂ ಇಲ್ಲ’

‘ಮತ್ತೆ ಇಂಜಿನಿಯರಿಂಗ್ ಓದುತ್ತಿದ್ದೀಯ?’ ಎಂದು ಅವಳು ಪ್ರಶ್ನಿಸುತ್ತಿದ್ದಾಗ ಅಂದುಕೊಳ್ಳದಿದ್ದ ಒಂದು ಘಟನೆ ನಡೆಯಿತು.

ಮಾತನಾಡುತ್ತ ಹೆಜ್ಜೆ ಮುಂದಿಟ್ಟ ಪ್ರೇಮ್ ಹಳ್ಳದೊಳಕ್ಕೆ ಜಾರಿ ಬಿದ್ದನು. ಒಳಗಿನಿಂದ ಆರ್ತನಾದ.

ಊಹಿಸದ ಆ ಘಟನೆಗೆ ಶಾಕ್ ಆದ ಅವಳು ‘ಅಯ್ಯೋ ಅಯ್ಯೋ’ ಎಂದು ಬಾಗಿ ಕೈಚಾಚಿದಳು. ಎಟುಕಲಿಲ್ಲ. ಗುಂಡಿ ಆಳವಾಗಿತ್ತು. ಅದೃಷ್ಟವಶಾತ್ ಅವನ ಕಾಲು ಉಳುಕಿತ್ತುಮ ಆದರೆ ಫ್ರಾಕ್ಚರ್ ಆಗಿರಲಿಲ್ಲ.

ಹಳ್ಳದಲ್ಲಿ ಅವನು, ಅದರ ಆಚೆ ಅವಳು! ಅವನನ್ನು ಮೇಲೆತ್ತುವುದಕ್ಕೆ ಬಹಳ ಹೊತ್ತು ಪ್ರಯತ್ನಿಸಿ, ಮತ್ತೇನು ಮಾಡಬೇಕೋ ತಿಳಿಯದೆ ಕುಳಿತು ಬಿಟ್ಟಳು. ಹಾಗೆ ಒಂದು ಗಂಟೆ ಉರುಳಿತು.

***

ಗಫಾರ್‌ಖಾನ್‌ನನ್ನು ಇಂಟರಾಗೇಟ್ ಮಾಡುವುದಕ್ಕೆ ಎಲ್ಲ ಏರ್ಪಾಡುಗಳು ಪೂರ್ತಿ ಆದವೇನು?’ ಎಂದು ಕೇಳಿದನು ಮಿಜ್ರಾಡಿನ್. ಟೆರರಿಸ್ಟ್‌ಗಳೂ ಪೊಲೀಸ್ ಭಾಷೆಯನ್ನೇ ಬಳಸುತ್ತಾರೆ. ತಾವು ಕೂಡ ಸೈನಿಕರೇ ಎಂದವರು ಭಾವಿಸಿರುತ್ತಾರೆ. ಮಿಲಿಟರಿಯವರ ಹಾಗೇ ಮೇಜರ್, ಕರ್ನಲ್, ಲೆಫ್ಟಿನೆಂಟ್, ಕಮಾಂಡರ್... ಈ ರೀತಿಯ ಪೋಸ್ಟ್‌ಗಳಿರುತ್ತವೆ.

‘ಎಲ್ಲ ಏರ್ಪಾಡೂ ಆಗಿದೆ ಲೆಫ್ಟಿನೆಂಟ್ ಸಾಹೇಬ್’ ಎಂದು ಹೇಳಿ, ‘ಹಲ್ವಾಫ್ ಬಂದ, ನಿಮ್ಮ ಜೊತೆ ಏನೋ ಮಾತನಾಡಬೇಕಂತೆ’ ಎಂದನು.

ಮಿಜ್ರಾಡಿಬ್ ಮುಖ ಸಿಂಡರಿಸಿ ‘ಏನು ವಿಷಯ?’ ಎಂದು ಕೇಳಿದನು.

‘ಗೊತ್ತಿಲ್ಲ ಸಾಬ್... ನಿಮ್ಮ ಮಗನ ವಿಷಯ ಇರಬಹುದು.’

ಇಮ್ತಿಯಾಜ್‌ನ ಹೆಸರು ಕೇಳಿದ ಕೂಡಲೆ ‘ಈಗಲೇ ಕರೆದುಕೊಂಡು ಬಾ.’ ಎಂದನು ಮಿಜ್ರಾಡಿನ್. ಹಲ್ವಾಫ್ ಒಳಗೆ ಬಂದನು.